ಅ) ಕರಾವಳಿ ಕ್ಷೇತ್ರದಲ್ಲಿ ಕಡಲಕೊರೆತ ಸಮಸ್ಯೆಗೆ ಪರಿಹಾರವಾಗಿ ಕಳೆದ ಎರಡು ವರ್ಷಗಳಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಸಂಖ್ಯೆ ಎಷ್ಟು? ಇದಕ್ಕೆ ಬಿಡುಗಡೆಯಾದ ಹಣವೆಷ್ಟು? ಆ ಪೈಕಿ ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು?

ಆ) ಕಡಲ ಕೊರೆತ ಕಾಮಗಾರಿಗಳಿಗೆ ಸಕಾಲದಲ್ಲಿ ಹಣ ಬಿಡುಗಡೆ ಮಾಡದೆ ಕಳಪೆ ಕಾಮಗಾರಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಉಳ್ಳಾಲ ಕ್ಷೇತ್ರದಲ್ಲಿ ಕೋಟೆಪುರ, ಮಾಗವೀರ ಪಟ್ಟಣ, ಶುಭಾಷನಗರ, ಸೋಮೇಶ್ವರ ಪ್ರದೇಶಗಳಲ್ಲಿ ಆಗಿರುವ ಕಡಲ ಕೊರೆತದ ಬಗ್ಗೆ ತಡೆಗೋಡೆ ನಿರ್ಮಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ ;

ಈ) ಹಾಗಿದ್ದಲ್ಲಿ ಅವುಗಳ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :—

ಅ) 261 ಕಾಮಗಾರಿಗಳು

ರೂ. 1717.90 ಲಕ್ಷಗಳು

60 ಕಾಮಗಾರಿಗಳು ಮುಗಿದಿವೆ,

3 ಕಾಮಗಾರಿಗಳು ಮುಗಿಯುವ ಹಂತದಲ್ಲಿದೆ.

ಆ) ಬಂದಿಲ್ಲ.

ಇ) ಕೈಗೊಳ್ಳಲಾಗಿದೆ.

(ಸೋಮೇಶ್ವರ ಪ್ರದೇಶದಲ್ಲಿ ಕಡಲ ಕೊರೆತ ಇರುವುದಿಲ್ಲ.)

ಈ) ಕಾಮಗಾರಿಗಳ ಪ್ರಗತಿಯು ವಿವಿಧ ಹಂತಗಳಲ್ಲಿವೆ.

ಶ್ರೀ ಕೆ. ಜಯರಾಮಶೆಟ್ಟಿ :— ಮಾನ್ಯ ಅಧ್ಯಕ್ಷರೇ, ಕಡಲ ಕೊರೆತಕ್ಕೆ ಸಂಬಂಧಪಟ್ಟ ಹಾಗೆ ಒಟ್ಟು 261 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ. ಆದರಲ್ಲಿ 60 ಕಾಮಗಾರಿಗಳು ಮುಗಿದಿದೆ ಎಂದು ಹೇಳುತ್ತಿದ್ದಾರೆ. ಆದರೆ ಒಟ್ಟು ಶೇಕಡ 15 ಕ್ಕಿಂತಲೂ ಕಡಿಮೆ ಕಾಮಗಾರಿಗಳನ್ನು ಇಷ್ಟು ವರ್ಷಗಳಲ್ಲಿ ಇವರು ಪೂರ್ಣಗೊಳಿಸಿದ್ದಾರೆ. 261 ಕಾಮಗಾರಿಗಳ ಒಟ್ಟು ಮೌಲ್ಯ ಅಂದಾಜು ವೆಚ್ಚವೆಷ್ಟು ಮತ್ತು ಮುಗಿದಿರುವ ಕಾಮಗಾರಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಮತ್ತು ಈ ಬಗ್ಗೆ ಗುತ್ತಿಗೆದಾರರಿಗೆ ಕೊಡಲು ಬಾಕಿ ಇರುವ ಹಣವೆಷ್ಟು? ಇದನ್ನು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮುಂತ್ರಿಗಳು) :— ಮಾನ್ಯ ಅಧ್ಯಕ್ಷರೇ, 261 ಕಾಮಗಾರಿಗಳು ಇರುವುದು ಸತ್ಯ. ಸನ್ಮಾನ್ಯ ಸದಸ್ಯರು ಇವಕ್ಕೆ ಒಟ್ಟು ಹಣ ಎಷ್ಟಾಗುತ್ತದೆ ಬಾಕಿ ಇರುವ ಹಣವೆಷ್ಟು ಎಂದು ಕೇಳಿದ್ದಾರೆ; ಆ ಎರಡೂ ಮಾಹಿತಿಯನ್ನು ನಾನು ಸನ್ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಕೆ. ಜಯರಾಮಶೆಟ್ಟಿ :— ಮಾನ್ಯ ಅಧ್ಯಕ್ಷರೇ, ಬಹುಶಃ ಅವರ ಹತ್ತಿರ ಮಾಹಿತಿ ಇಲ್ಲವೆಂದರೆ ಹಣ ಬಿಡುಗಡೆ ಮಾಡಿಲ್ಲ, ಏನೂ ಇಲ್ಲ. ಕಳಪೆ ಕಾಮಗಾರಿ ಆಗಲಿಲ್ಲ ಎಂದು ಹೇಳುತ್ತಿದ್ದಾರೆ, ಅಲ್ಲಿ ಹಣ ಬಿಡುಗಡೆ ಮಾಡದೇ ಇರುವುದರಿಂದ ಕಳಪೆ ಕಾಮಗಾರಿಯಾಗಿದೆ. ಪ್ರಥಮ ಹಂತದಲ್ಲಿ ತಾತ್ಕಾಲಿಕ ಕಡಲ ಕೊರೆತಕ್ಕೆ ಕಲ್ಲು ಹಾಕುವ ಬಗ್ಗೆ ಯಾವುದೇ ಕಾಮಗಾರಿಯಾಗಲಿಲ್ಲ. ನೀವು ಕೊಟ್ಟಿರುವುದು ಎಂದರೆ ಒಂದು ಕೋಟಿ ಇದ್ದರೆ ಹತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಸುಮಾರು 90 ಲಕ್ಷ ರೂ. ಬಾಕಿ ಇರುವುದರಿಂದ ಅಲ್ಲಿ ಕೆಲಸವಾಗಿಲ್ಲ.

ಅಧ್ಯಕ್ಷರು :— ಮಾನ್ಯ ಜಯರಾಮಶೆಟ್ಟರೇ, ಹಣ ಬಿಡುಗಡೆ ಮಾಡದೇ ಇದ್ದರೆ ಕೆಲಸದ ಪ್ರಗತಿ ಸಾಧನೆಯಾಗುವುದಿಲ್ಲ. ಕಡಿಮೆ ಹಣ ಬಿಡುಗಡೆ ಮಾಡಿದರೆ ಕಳಪೆ ಕೆಲಸ ಮಾಡಬೇಕೆಂದು ಇಲ್ಲ. ಎಷ್ಟು ಹಣ ಬಿಡುಗಡೆ ಮಾಡಿದರೆ ಅಷ್ಟು ಹಣ ವ್ಯವಸ್ಥಿತವಾಗಿ ಮಾಡಬೇಕು.

ಶ್ರೀ ಕೆ. ಜಯರಾಮಶೆಟ್ಟಿ :— ಅಧ್ಯಕ್ಷರೇ, ಅದು ತಪ್ಪು ಮಾಹಿತಿ ತಮಗೆ ಬಂದಿದೆ. ಏಕೆಂದರೆ ಕಡಲ ಕೊರೆತ ಆದ ತಕ್ಷಣ ಜನರು ಬೊಬ್ಬೆ ಹೊಡೆಯುತ್ತಿದ್ದಾರೆ. ಗಲಾಟೆ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಕೆಲಾಮಿಟೀಸ್ ಫಂಡ್‌ನಿಂದ ಹಣವನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ.ಸರ್ಕಾರ ಕೂಡ ಹೇಳುತ್ತಿದೆ. ಅಂಥ ಸಂದರ್ಭದಲ್ಲಿ ಹಣ ಬಾರದಿದ್ದರೆ ಸ್ವಲ್ಪ ಹಾಗಾಗಿ ಮಾಡಿಬಿಡುತ್ತಾರೆ. ಮತ್ತೆ ಪೂರ್ತಿ ಹಣವನ್ನು ತೆಗೆದುಕೊಳ್ಳುವುದಕ್ಕೆ ಬಿಲ್ ಮಾಡುತ್ತಿದ್ದಾರೆ. ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎರಡನೆಯದಾಗಿ ಕೇರಳದಲ್ಲಿ ತಮ್ಮ ಸರ್ಕಾರ ಬರುವುದಕ್ಕೆ ಮುಂಚೆ 300 ಕೋಟಿ ರೂಪಾಯಿಗಳಷ್ಟು ಕಡಲ ಕೊರೆತ ಕಾಮಗಾರಿಯನ್ನು ಪೂರೈಸಿದ್ದಾರೆ. ಈಗಾಗಲೇ ಈ ವರ್ಷದಿಂದ 1352 ಕೋಟಿ ರೂಪಾಯಿಗಳು ಕೇರಳಕ್ಕೆ ಸ್ಯಾಂಕ್ಷನ್ ಆಗಿದೆ. ನಾವು ನಮ್ಮ ರಾಜ್ಯದಿಂದ ಕಳೆದ ವರ್ಷ 500 ಕೋಟಿ ರೂ.ಗೆ ಕಡಲ ಕೊರೆತದ ಬಗ್ಗೆ ಎಸ್ಟಿಮೇಟ್ ಮಾಡಿ ಕಳುಹಿಸಿದ್ದೆವು. ಆದ್ದರಿಂದ ಇದರ ಬಗ್ಗೆ ಏನು ಪ್ರಗತಿಯಾಗಿದೆ? ಈ ಕಾಮಗಾರಿಗಳನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

ಶ್ರೀ ತಿಪ್ಪೇಸ್ವಾಮಿ :— ಮಾನ್ಯ ಅಧ್ಯಕ್ಷರೇ, ನಾವೂ ಸಹಾ ಭಾರತಸರ್ಕಾರಕ್ಕೆ ಕಡಲ ಕೊರೆತಕ್ಕೆ ಒಂದಿಷ್ಟು ಹಣ ಕೊಡಿ ಎಂದು ಕೇಳಿದ್ದು ಸತ್ಯ. ಆ ಹಣ ಇನ್ನೂ ನಮಗೆ ಬಂದಿಲ್ಲ. ಏನು ಸನ್ಮಾನ್ಯ ಸದಸ್ಯರು ಈ ಕಾಮಗಾರಿಗಳು ಇಷ್ಟೊಂದು ಉಳಿದು

ಏನು ಇಷ್ಟೊಂದು ತಡವಾಗುತ್ತೆ ಎಂದರೆ ಕಡಲ ಕೊರೆತದಲ್ಲಿ ಅರ್ಜೆಂಟ್ ಆಗಿ ತುರ್ತು ಕಾಮಗಾರಿಗಳನ್ನು ಮಾಡುವ ಅವಶ್ಯಕತೆ ಬರುತ್ತದೆ. ತುರ್ತು ಕೆಲಸ ಮಾಡಿದಾಗ ನಾವು ಅಷ್ಟೋ ಇಷ್ಟೋ ಕೆಲಸ ಮಾಡಿ ಅದಕ್ಕೆ ಹಣ ಮಂಜೂರಾತಿಯಾಗಿರುವುದಿಲ್ಲ, ಎಸ್ಟಿಮೇಟ್ ಆಗಿರುವುದಿಲ್ಲ, ಕಡಲ ಕೊರೆತ ವಿಕೋಪಕ್ಕೆ ಬಂದಾಗ ನಾವು ಅರ್ಜೆಂಟ್ ಆಗಿ ಕೆಲಸ ಮಾಡುತ್ತೇವೆ. ಹಾಗಾಗಿ ಕೆಲವು ಕಾಮಗಾರಿಗಳು ನಿಂತಿವೆ ವಿನಹಾ ಎಸ್ಟಿಮೇಟ್ ಮಾಡಿ ಹಣ ಲಭ್ಯತೆ ಇರುವ ಕಾಮಗಾರಿಗಳನ್ನು ನಿಲ್ಲಿಸುವುದಕ್ಕೆ ಹೋಗಿಲ್ಲ.

ಶ್ರೀ ಕೆ. ಜಯರಾಮಶೆಟ್ಟಿ :— 500 ಕೋಟಿ ರೂಪಾಯಿ ಎಸ್ಟಿಮೇಟ್‌ನದು ಯಾವ ಹಂತದಲ್ಲಿದೆ? ಏಕೆಂದರೆ ನಮ್ಮ ಇಲಾಖೆಯಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರೆ ಕೇರಳಕ್ಕೆ, ಆಂಧ್ರಕ್ಕೆ ಬರುತ್ತದೆ. ನಮ್ಮ ಕರ್ನಾಟಕ ರಾಜ್ಯಕ್ಕೆ ಏಕೆ ಬರುವುದಿಲ್ಲ? ತಮ್ಮ ಆಡಳಿತ ವೈಫಲ್ಯದಿಂದಲೋ ಅಥವಾ ಆಡಳಿತ ಬದುಕು ಇಲ್ಲದ್ದರಿಂದಲೋ ತಾವು ದಯವಿಟ್ಟು ಇದಕ್ಕೆ ಉತ್ತರವನ್ನು ಕೊಡಬೇಕು. ಮತ್ತು ಇದು ಯಾವಾಗ ಆಗುತ್ತದೆ? ತಮ್ಮ ಹತ್ತಿರ ಏನು ಮಾಹಿತಿ ಇದೆ?

ಶ್ರೀ ತಿಪ್ಪೇಸ್ವಾಮಿ :— ಈ ಬಗ್ಗೆ ಹಣ ಕೊಡಿ ಎಂದು ನಾವು ಕೇಳುತ್ತೇವೆ. ಭಾರತ ಸರ್ಕಾರ ಒಬ್ಬರಿಗೊಂದು ಮತ್ತೊಬ್ಬರಿಗೆ ಒಂದು ಮಾಡಿದರೆ ನಾವು ಹೇಗೆ ಉತ್ತರವನ್ನು ಕೊಡುವುದಕ್ಕಾಗುತ್ತದೆ.? ಅದಕ್ಕೆ ಪಾರ್ಲಿಮೆಂಟ್‌ನಲ್ಲಿ ಉತ್ತರ ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ :— ಈ ರೀತಿ ಉತ್ತರ ಹೇಳುವುದು ಸರಿಯಲ್ಲ. ಭಾರತ ಸರ್ಕಾರ ಹೇಗೆ ಒಬ್ಬರಿಗೊಂದು ಮತ್ತೊಬ್ಬರಿಗೆ ಒಂದು ಮಾಡುತ್ತದೆ? ಈ ಬಗ್ಗೆ ರಾಜ್ಯ ಸರ್ಕಾರದಿಂದ ಸರಿಯಾದ ರೀತಿಯಲ್ಲಿ ಮನವರಿಕೆ ಮಾಡಿಕೊಡುವ ಪ್ರಯತ್ನವಾಗಿಲ್ಲ. ನಾನು ಸ್ವತಃ ಕೇಂದ್ರದ ಸಚಿವರ ಜೊತೆಯಲ್ಲಿ ಮಾತನಾಡಿದ್ದೇನೆ. ರಾಜ್ಯ ಸರ್ಕಾರ ಅದಕ್ಕೆ ಬೇಕಾದ ಮನವರಿಕೆಯನ್ನು ಮಾಡಿಕೊಟ್ಟಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಅಧ್ಯಕ್ಷರು :— ರಾಜ್ಯಸರ್ಕಾರದವರು ತಮ್ಮ ಪ್ರಯತ್ನವನ್ನು ಸರಿಯಾಗಿ ಮಾಡಿಲ್ಲ ಎನ್ನುವ ಮಾತನ್ನು ಕೇಂದ್ರ ಸರ್ಕಾರದಲ್ಲಿ ಜವಾಬ್ದಾರಿಯಲ್ಲಿರತಕ್ಕಂಥವರು ಹೇಳಬೇಕಾದ್ದು ನಿಮಗಲ್ಲ; ಇವರಿಗೆ ಹೇಳಬೇಕಾಗಿರುವುದು.

ಶ್ರೀ ಕೆ. ಜಯರಾಮಶೆಟ್ಟಿ :— ರಾಜ್ಯ ಸರ್ಕಾರ ಜನರ ಸಮಸ್ಯೆಯನ್ನು ಅರಿತುಕೊಳ್ಳಲಿಲ್ಲ.

MR. SPEAKER :— Listen to me. This matter is beyond your jurisdiction . ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಬೇಡಿಕೆಯನ್ನು ಮಂಡಿಸಿರುತ್ತಾರೆ. ಅಲ್ಲಿಂದ ಅವರಿಗೆ ಇರುವ ಸಮಸ್ಯೆ ನೋಡಿಕೊಂಡು ಅವರೆಷ್ಟು ಹಣವನ್ನು ಕೊಡುತ್ತಾರೋ, ಅದನ್ನು ವಿನಿಯೋಗ ಮಾಡಿರುತ್ತಾರೆ.

ಶ್ರೀ ಕೆ. ಜಯರಾಮಶೆಟ್ಟಿ :— ಬೇರೆ ರಾಜ್ಯಗಳಿಗೆ ಹಣ ಬರುತ್ತದೆ. ನಮ್ಮ ರಾಜ್ಯಕ್ಕೆ ಏಕೆ ಬರುವುದಿಲ್ಲ.?

ಅಧ್ಯಕ್ಷರು :— ಹಾಗೆಯೇ. ಇಲ್ಲಿ ಕ್ಷೇತ್ರಾವಾರು ಅಸಮಾನತೆಯಾಗಿದೆ ಎಂದು ಹೇಳಿ ನೀವು ಒಂದೊಂದು ಸಾರಿ ಕೂಗಾಡುವುದಿಲ್ಲವೇ? ಮನೆ ಹಂಚಿಕೆ ಬಗ್ಗೆ ಒಂದೊಂದು ಕ್ಷೇತ್ರಕ್ಕೆ ಒಂದೊಂದು ಮಾಡಿದ್ದೀರಿ ಎಂದು ಇಲ್ಲಿ ಗಲಾಟೆ ಮಾಡುವುದಿಲ್ಲವೇ? ಹಾಗೆಯೇ ನಿಷ್ಪೆ ಮತ್ತೆ ಬೆಂಬಲವನ್ನು ಅನುಸರಿಸಿ ಒಂದೊಂದು ರಾಜ್ಯಕ್ಕೆ ಒಂದೊಂದು ರೀತಿ ಕೇಂದ್ರದಲ್ಲಿ ಯಾವುದೇ ಸರ್ಕಾರ ಇದ್ದರೂ ನಡೆಯತಕ್ಕಂಥದ್ದು ಸತ್ಯ.

ಶ್ರೀ ಕೆ. ಜಯರಾಮಶೆಟ್ಟಿ :— ಹಾಗೆ ಆದದ್ದಲ್ಲ. ಈ ಸಮಸ್ಯೆಯನ್ನು ಅವರಿಗೆ ಸರಿಯಾಗಿ ತಿಳಿದಿಲ್ಲ.

ಅಧ್ಯಕ್ಷರು :— ಪಾರ್ಲಿಮೆಂಟ್ಸ್ ಕ್ಯಾಂಡಿಡೇಟ್ಸ್ ನಿಮ್ ಪೈಕಿ ಯಾರ್ಯಾರು?

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಹಣ ಬಿಡುಗಡೆ ಆಗಿದ್ದಕ್ಕೆ ಯುಟಿಲೈಸೇಷನ್ ಸರ್ಟಿಫಿಕೇಟ್‌ಗಳು ರಾಜ್ಯ ಸರ್ಕಾರದ ಸುಮಾರು ಇಲಾಖೆಯಿಂದ ಹೋಗದೇ ಇರುವುದರಿಂದ, ಎರಡನೇ ಕಂತಿನ ಹಣವನ್ನು ಬಿಡುಗಡೆ ಮಾಡಿಲ್ಲ. ಎರಡನೇ ಕಂತಿನ ಹಣವನ್ನು ಬಿಡುಗಡೆ ಮಾಡದಿರುವುದಕ್ಕೆ ರಾಜ್ಯ ಸರ್ಕಾರವೇ ಕಾರಣ ಎನ್ನುವುದನ್ನು ತಮ್ಮ ಮೂಲಕ ಅವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ :— ಭಾರತ ಸರ್ಕಾರ ನಮಗೆ ಅನ್ಯಾಯ ಮಾಡಿದೆ ಎಂದು ನಾನು ಹೇಳಲಿಲ್ಲ. ಭಾರತ ಸರ್ಕಾರದವರು ಅವರಿಗೆ ಹಣ ಕೊಟ್ಟಿದ್ದಾರೆ, ನಮಗೆ ಕೊಟ್ಟಿಲ್ಲ ಎಂದು ತಾವು ಹೇಳಿದರೆ ಹೇಗೆ? ಭಾರತ ಸರ್ಕಾರವನ್ನು ನಿಂದನೆ ಮಾಡಿ, ಬೆಳಕಿಗೆ ತಂದಿದ್ದು ತಾವು.

ಶ್ರೀ ಕೆ. ಯೋಗೀಶ್ ಭಟ್ :— ಈ ಬಗ್ಗೆ ನಿಗಮವನ್ನು ಆರಂಭ ಮಾಡಿ, ಬಾಂಡ್ ಮೂಲಕ ಹಣವನ್ನು ಸಂಗ್ರಹ ಮಾಡಿದ್ದರೂ 450 ಕೋಟಿ ರೂಪಾಯಿ ಇವತ್ತು ಕೊರತೆ ಇರುವಂತಹ ಹಣವನ್ನು ಸಂಗ್ರಹಿಸುವಂತೆ ಆಗಿದೆ. ಸನ್ಮಾನ್ಯ ಮೀನುಗಾರಿಕೆ ಸಚಿವರು ಹಿಂದೆ ಆಶ್ವಾಸನೆ ಕೊಟ್ಟಿದ್ದರು. ಇದನ್ನು ತಮ್ಮ ಗಮನಕ್ಕೆ ತಂದು, ಈ ನಿಗಮ ಯಾವ ಹಂತದಲ್ಲಿ ಕಾರ್ಯ ಮಾಡುತ್ತಿದೆ? ಬಾಂಡ್‌ನ ಮೂಲಕ ಎಷ್ಟು ಹಣ ಸಂಗ್ರಹ ಆಗಿದೆ? ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತಿದ್ದೇವೆ.

ಶ್ರೀ ತಿಪ್ಪೇಸ್ವಾಮಿ :— ನಾವು ಸಣ್ಣ ನೀರಾವರಿ ಇಲಾಖೆಗೂ ಒಂದು ನಿಗಮ ಮಾಡಬೇಕೆನ್ನುವ ಒಂದು ಪ್ರಯತ್ನ ಇದೆ. ಮುಂದಿನ ಸಚಿವ ಸಂಪುಟದಲ್ಲಿ ಆ ಒಂದು ವಿಷಯ ಮಂಡನೆ ಮಾಡುವವನು ಇದ್ದೇನೆ. ಸಚಿವ ಸಂಪುಟ ಒಪ್ಪಿಗೆ ಕೊಟ್ಟರೆ ಇದಕ್ಕೂ ಸಹ ಹಣ ತೊಡಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.